ಕರ್ನಾಟಕ ಸರ್ಕಾರ
ನೋಂದಣಿ ಮತು ಮುದ್ರಾಂಕ ಇಲಾಖೆ

ಸಂಖ್ಯೆ:ಕಾನೂನು/ಇತರೆ/72/2021-22

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರ ಕಛೇರಿ
8ನೇ ಮಹಡಿ, ಕಂದಾಯ ಭವನ,
ಕೆ.ಜಿ.ರೋಡ್, ಬೆಂಗಳೂರು-09
ದಿನಾಂಕ: 12/01/2022.

# ಜ್ಞಾಪನ

**ವಿಷಯ:** ಮಾನ್ಯ ಸರ್ವೋಚ್ಛ ನ್ಯಾಯಾಲಯ ಮತ್ತು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ Special Leave Petition ಸ್ಪೆಷಲ್ ಲೀವ್ ಪಿಟಿಷನ್/ Writ Petition ರಿಟ್ ಪಿಟಿಷನ್/ Review Petition ರೀವ್ಯೂ ಪಿಟಿಷನ್ / Writ Appeal ರಿಟ್ ಅಪೀಲು ಪ್ರಕರಣಗಳಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಆಯುಕ್ತರು, ರವರನ್ನು ಪಕ್ಷಕಾರರನ್ನಾಗಿ IMPLEADING APPLICANT ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 344 ಮುನೋನೋ 2008, ದಿನಾಂಕ: 06-04-2009.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 47 ಮುನೋಮು 2016, ದಿನಾಂಕ: 05-10-2016.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳುರವರ ಅಧ್ಯಕ್ಷತೆಯಲ್ಲಿ ದಿನಾಂಕ:30-12-2018 ರಂದು ನಡೆದ ಸಭೆಯ ನಡವಳಿಗಳು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಲ್ಲಿ ಕೃಷಿ ಜಮೀನುಗಳ ವರ್ಗಾವಣೆ ಪತ್ರಗಳ ನೋಂದಣಿ ಸಮಯದಲ್ಲಿ ಜಮೀನಿನ ಸರ್ವೇ ಸ್ಕೆಚ್ ನಮೂನೆ-11ಇ (ಕರ್ನಾಟಕ ಭೂ ಕಂದಾಯ ಕಾಯ್ದೆ 1961 ರ ಕಲಂ 131(ಸಿ) ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳ ನಿಯಮ 46(ಎಚ್) ರಡಿ ವಿಧಿಸಿರುವಂತೆ) ಪಡೆದು ನೋಂದಾಯಿಸಲು ನಿರ್ದೇಶನ ನೀಡಲಾಗಿತ್ತು. ಸದರಿ ಸರ್ಕಾರದ ಉಲ್ಲೇಖ(1)ರ ಸುತ್ತೋಲೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 18939/2009 ಮತ್ತು 14050/2012 ಪ್ರಕರಣಗಳಲ್ಲಿ ದಿನಾಂಕ:18-03-2016 ರಲ್ಲಿ ರದ್ದುಪಡಿಸಿ ಆದೇಶಿಸಿತ್ತು. ಮಾನ್ಯ ನ್ಯಾಯಾಲಯದ ಸದರಿ ಆದೇಶವನ್ನು ಮಾನ್ಯ ಸುಪ್ರಿಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದ್ದು, ಸರ್ವೋಚ್ಛ ನ್ಯಾಯಾಲಯವು ಎಸ್.ಎಲ್.ಪಿ ಸಂಖ್ಯೆ: 15837-38/2016 ಪ್ರಕರಣದಲ್ಲಿ ದಿನಾಂಕ: 11-07-2016 ರಂದು ಮುಂದಿನ ಆದೇಶದವರೆಗೆ ತಡೆಯಾಜ್ಞೆ ನೀಡಿರುತ್ತದೆ.

ಉಲ್ಲೇಖ(2)ರ ಸರ್ಕಾರದ ಸುತ್ತೋಲೆಯಲ್ಲಿ ಕಾವೇರಿ ತಂತ್ರಾಂಶ ಮತ್ತು ಜಮೀನಿನ ಸರ್ವೆ ನಕ್ಷೆ(ಸ್ಕೆಚ್) ನಮೂನೆ-11ಇ ಇರುವ ಮೋಜಣಿ ತಂತ್ರಾಂಶವನ್ನು ಸಂಯೋಜನೆಗೊಳಿಸಿರುವುದರಿಂದ ದಿನಾಂಕ: 05-10-2016 ರಿಂದ ಕೃಷಿ ಜಮೀನಿನ ನೋಂದಣಿಗೆ "ಭೂಮಿ" ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಣಿ ಮಾಡುವ ವಿಧಾನದಲ್ಲಿ, ಜಮೀನಿನ ಸರ್ವೆ ನಕ್ಷೆ (ಸ್ಕೆಚ್)-ನಮೂನೆ 11-ಇ ಇರುವ "ಮೋಜಣಿ" ತಂತ್ರಾಂಶದಿಂದ ಮಾಹಿತಿ ಪಡೆದು ನೋಂದಣಿ ಮಾಡಲು ಎಂದು ಸುತ್ತೋಲೆ ನೀಡಲಾಗಿರುತ್ತದೆ.

ಉಲ್ಲೇಖ(3)ರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆ ನಡವಳಿಯಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಆಯುಕ್ತರು 11-ಇ ನಕ್ಷೆ ಇಲ್ಲದೆ ನ್ಯಾಯಾಲಯಗಳಲ್ಲಿ ಬರೆದುಕೊಡುವ ದಸ್ತಾವೇಜುಗಳನ್ನು ನೋಂದಣಿ ಮಾಡುತ್ತಿರುವುದರಿಂದ ಭೂಮಿ ಮೋಜಿಣಿ ಸಂಯೋಜನೆ ವ್ಯವಸ್ಥೆಯನ್ನು By Pass ಮಾಡುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ, ಗೌರವಾನ್ವಿತ ನ್ಯಾಯಾಲಯಗಳು 11-ಇ ನಕ್ಷೆ ವಿನಾಯ್ತಿ ನೀಡಿ ನೋಂದಣಿ ಮಾಡಲು ನಿರ್ದೇಶಿಸಿರುವ ಆದೇಶಗಳನ್ನು ಮೇಲ್ಮನವಿ ಸಲ್ಲಿಸುವ ಮೂಲಕ ಪ್ರಶ್ನಿಸಬೇಕೆಂದು ತೀರ್ಮಾನವಾಗಿರುತ್ತದೆ.

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಅಧಿಕಾರಿಗಳು ಕರ್ನಾಟಕ ಭೂ ಕಂದಾಯ ಕಾಯ್ದೆ 1961 ಹಾಗೂ ಕರ್ನಾಟಕ ಭೂ ಕಂದಾಯ ನಿಯಮಗಳ ಅಡಿ ಕಾರ್ಯನಿರ್ವಹಿಸುತ್ತಿದ್ದು ಕೃಷಿ ಜಮೀನುಗಳ

ವರ್ಗಾವಣೆ ಪತ್ರಗಳ ನೋಂದಣಿ ಸಮಯದಲ್ಲಿ ಜಮೀನಿನ ಸರ್ವೇ ಸ್ಕೆಚ್ ನಮೂನೆ-11ಇ ನೀಡುತ್ತಿರುತ್ತಾರೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಉಪನೋಂದಣಾಧಿಕಾರಿಗಳು ನೋಂದಣಿ ಕಾಯ್ದೆ 1908 ಹಾಗೂ ಕರ್ನಾಟಕ ನೋಂದಣಿ ನಿಯಮಾವಳಿಗಳು 1965 ರಡಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ,

ಉಲ್ಲೇಖ(1), (2) ಮತ್ತು (3)ರಲ್ಲಿನ ನಿರ್ದೇಶನಗಳನ್ವಯ ಕೃಷಿ ಜಮೀನುಗಳ ವರ್ಗಾವಣೆ ಪತ್ರಗಳ ನೋಂದಣಿ ಸಮಯದಲ್ಲಿ, ಮೋಜಣಿ ತಂತ್ರಾಂಶದಲ್ಲಿ ಮಾಹಿತಿ ಲಭ್ಯವಿರದ ಸಂದರ್ಭಗಳಲ್ಲಿ ಉಪನೋಂದಣಾಧಿಕಾರಿಗಳು ಹಿಂಬರಹಗಳನ್ನು ನೀಡುತ್ತಿರುವುದರಿಂದ ಮಾನ್ಯ ನ್ಯಾಯಾಲಯಗಳಲ್ಲಿ ಹಲವಾರು ಪ್ರಕರಣಗಳು ದಾಖಲಾಗುತ್ತಿದ್ದು, ಅಂತಹ ಹೆಚ್ಚಿನ ಪ್ರಕರಣಗಳಲ್ಲಿ ಸರ್ಕಾರದ ವಿರುದ್ದವಾಗಿ ಆದೇಶಗಳಾಗಿರುತ್ತದೆ ಹಾಗೂ ನ್ಯಾಯಾಂಗ ನಿಂದನಾ ಪ್ರಕರಣಗಳು ದಾಖಲಾಗುತ್ತಿರುತ್ತದೆ.

ಪ್ರಶ್ನಿತ ವಿಷಯ **ಸರ್ವೆ ಸ್ಕೆಚ್ ನಮೂನೆ 11-ಇ** ಸಂಬಂಧಿಸಿದಂತೆ ಕಾವೇರಿ ತಂತ್ರಾಂಶ ಮತ್ತು ಮೋಜಿಣಿ ತಂತ್ರಾಂಶ ಉಲ್ಲೇಖ (2) ರ ಸಂಯೋಜನೆ ಅವಶ್ಯಕತೆಯು ಕೃಷಿ ಜಮೀನುಗಳನ್ನು ಖಾತೆ ಮಾಡಲು ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಅಧಿಕಾರಿಗಳಿಗೆ ಅತ್ಯವಶ್ಯಕವಾಗಿರುತ್ತದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಜನರಿಗೆ ನೇರ ಸಂಪರ್ಕಕ್ಕೆ ಬರುವ ಇಲಾಖೆಯಾಗಿದ್ದು, ಕಾವೇರಿ-ಮೋಜಿಣಿ ತಂತ್ರಾಂಶವನ್ನು ಸಾರ್ವಜನಿಕರಲ್ಲಿ ಕೃಷಿ ಜಮೀನಿಗೆ ಸಂಭಂದಪಟ್ಟಂತೆ ಉಂಟಾಗುವ ತೊಂದರೆಗಳನ್ನು ನಿವಾರಿಸಲು ಹಾಗೂ **ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯವರ** ಅವಶ್ಯಕತೆಗನುಗುಣವಾಗಿ ಸಂಯೋಜನೆಗೊಳಿಸಲಾಗಿರುತ್ತದೆ. ಪ್ರಶ್ನಿತ ನ್ಯಾಯಾಲಯದ ಪ್ರಕರಣವು **ಸರ್ವೆ ಸ್ಕೆಚ್ ನಮೂನೆ 11-ಇ** ಬಗ್ಗೆ ದಾಖಲಾಗಿರುವುದರಿಂದ ಕೃಷಿ ಜಮೀನುಗಳಿಗೆ ಸಂಬಂಧಿಸಿದ 11-ಇ ನಕ್ಷೆ ಅವಶ್ಯಕತೆ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿರುವ ಹಾಗೂ ಕಾವೇರಿ-ಮೋಜಿಣಿ ತಂತ್ರಾಂಶದ ಅವಶ್ಯಕತೆ ಇರುವ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಅಧಿಕಾರಿಗಳನ್ನು ಪಕ್ಷಕಾರರನ್ನಾಗಿ ಮಾಡುವುದು ಸಮಂಜಸವಾಗಿರುತ್ತದೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಕಾರಿಗಳನ್ನು **ಮಾತ್ರ** ಪಕ್ಷಕಾರನ್ನಾಗಿ ಮಾಡಿರುವುದರಿಂದಾಗಿ ಕಾನೂನಾತ್ಮಕವಾಗಿ ಸಮರ್ಥವಾಗಿ ವಾದ ಮಂಡಿಸಿದರು ಸಹಾ ಹಲವು ನ್ಯಾಯಾಲಯದ ಪ್ರಕರಣಗಳಲ್ಲಿ ಹಿನ್ನಡೆ ಅನುಭವಿಸಿ ಮುಜುಗರ ಉಂಟಾಗುತ್ತಿರುತ್ತದೆ. ಆದ್ದರಿಂದ ಪ್ರಶ್ನಿತ ನ್ಯಾಯಾಲಯದ ಪ್ರಕರಣಗಳಲ್ಲಿ **ಸರ್ಕಾರದ ಹಿತದೃಷ್ಟಿಯಿಂದ** ಸಮಗ್ರವಾಗಿ (Holistic approach) ವಾದ ಮಂಡಿಸಿ ಸರ್ಕಾರದ ಪರವಾಗಿ ಇತ್ಯರ್ಥ ಮಾಡಿಕೊಳ್ಳಲು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಕಾರಿಗಳ ಜೊತೆಗೆ ಪ್ರಕರಣದ ವಿಷಯಕ್ಕೆ ಸಂಬಂಧಿಸಿದ **ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಅಧಿಕಾರಿಗಳನ್ನು ಪಕ್ಷಕಾರರನ್ನಾಗಿ** (IMPLEADING APPLICANT) ಮಾಡುವುದು ಅತ್ಯಾವಶ್ಯಕವಾಗಿರುತ್ತದೆ.

ಮೇಲೆ ಹೇಳಿರುವ ಅಂಶಗಳ ಹಿನ್ನಲೆಯಲ್ಲಿ ನ್ಯಾಯಾಲಯದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಕಾರಿಗಳು ಹಾಗೂ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಅಧಿಕಾರಿಗಳು "ಸಮನ್ವಯದಿಂದ" ಸಮರ್ಪಕವಾಗಿ ವಾದ ಮಂಡಿಸಿ ಸರ್ಕಾರದ ಪರವಾಗಿ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಬೇಕಾಗಿರುವುದರಿಂದ ಮಾನ್ಯ ಸರ್ವೋಚ್ಛ ನ್ಯಾಯಾಲಯ ಮತ್ತು ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ದಾಖಲಾದ Special Leave Petition ಸ್ಪೆಷಲ್ ಲೀವ್ ಪಿಟಿಷನ್/ Writ Petition ರಿಟ್ ಪಿಟಿಷನ್/ Review Petition ರೀವ್ಯೂ ಪಿಟಿಷನ್ / Writ Appeal ರಿಟ್ ಅಪೀಲು ಪ್ರಕರಣಗಳಲ್ಲಿ **ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯ ಆಯುಕ್ತರು.** ರವರನ್ನು ಪಕ್ಷಕಾರರನ್ನಾಗಿ (IMPLEADING APPLICANT) ಆಗಿ ಮಾಡಲು ಅಗತ್ಯ ಕ್ರಮ ವಹಿಸುವಂತೆ ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳು, ಮತ್ತು ಜಿಲ್ಲಾನೋಂದಣಾಧಿಕಾರಿಗಳಿಗೆ ನಿರ್ದೇಶಿಸಿದೆ.

12.1.22

ನೋಂದಣಿ ಮಹಾಪರಿವೀಕ್ಷಕರು
ಮತ್ತು ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

ಪ್ರತಿಯನ್ನು:

- ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.
- ರಾಜ್ಯದ ಎಲ್ಲಾ ಉಪನೋಂದಣಾಧಿಕಾರಿಗಳು, ಮತ್ತು ಜಿಲ್ಲಾನೋಂದಣಾಧಿಕಾರಿಗಳು, ರವರ ಸೂಕ್ತ ಕ್ರಮಕ್ಕಾಗಿ.
- ಕಛೇರಿ ಕಡತಕ್ಕೆ.